# ಮುನ್ನುಡಿ

1. ಈ ವರದಿಯನ್ನು ಸಂವಿಧಾನದ ಅನುಚ್ಛೇದ 151ರ ಅನ್ವಯ ರಾಜ್ಯಪಾಲರಿಗೆ ಕರ್ನಾಟಕ ವಿಧಾನ ಮಂಡಲದಲ್ಲಿ ಸಲ್ಲಿಸಲು ತಯಾರಿಸಲಾಗಿದೆ.

2. ಈ ವರದಿಯ ಅಧ್ಯಾಯ– 1 ರಾಜ್ಯ ಹಣಕಾಸಿನ ವ್ಯವಹಾರಗಳ ಲೆಕ್ಕ ಪರಿಶೀಲನಾ ವರದಿಯ ಆಧಾರ ಮತ್ತು ವಿಧಾನ, ಸರ್ಕಾರಿ ಲೆಕ್ಕಗಳ ರಚನೆ, ಆಯವ್ಯಯ ಪ್ರಕ್ರಿಯೆಗಳು, ಪ್ರಮುಖ ಸೂಚ್ಯಂಕಗಳಾದ ರಾಜಸ್ವ ಹೆಚ್ಚಳ ಮತ್ತು ಆರ್ಥಿಕ ಕೊರತೆಗಳ ಪ್ರವೃತ್ತಿ ಹಾಗೂ ಆರ್ಥಿಕ ತಿದ್ದುಪಡಿಗಳ ಮಾರ್ಗಗಳನ್ನು ಒಳಗೊಂಡಿದೆ.

3. ಈ ವರದಿಯ ಅಧ್ಯಾಯ– 2 ಮತ್ತು 3 ಕ್ರಮವಾಗಿ, ರಾಜ್ಯ ಸರ್ಕಾರದ 31 ಮಾರ್ಚ್ 2021ಕ್ಕೆ ಅಂತ್ಯಗೊಂಡ ವರ್ಷದ ಹಣಕಾಸು ಲೆಕ್ಕಗಳು ಮತ್ತು ಧನವಿನಿಯೋಗ ಲೆಕ್ಕಗಳ ಪರಿಶೋಧನೆಯಲ್ಲಿ ಕಂಡು ಬಂದ ಅಂಶಗಳನ್ನು ಹೊಂದಿವೆ. ಅಗತ್ಯವಿದ್ದ ಕಡೆ ರಾಜ್ಯ ಸರ್ಕಾರದಿಂದಲೂ ಮಾಹಿತಿಯನ್ನು ಪಡೆಯಲಾಗಿದೆ.

4. ಅಧ್ಯಾಯ–4 ಲೆಕ್ಕಗಳ ಗುಣಮಟ್ಟ ಮತ್ತು ಆರ್ಥಿಕ ನಿರೂಪಣಾ ಪದ್ಧತಿಗಳಲ್ಲಿ 2020–21ನೇ ವರ್ಷದಲ್ಲಿ ರಾಜ್ಯ ಸರ್ಕಾರದ ಹಣಕಾಸು ನಿಯಮಗಳು, ಕಾರ್ಯ ವಿಧಾನಗಳು ಮತ್ತು ನಿರ್ದೇಶನಗಳ ಸ್ಥೂಲ ಸಮೀಕ್ಷೆಯೊಂದಿಗೆ ಅನುಪಾಲನೆಯ ಸ್ಥಿತಿಯನ್ನು ನಿರೂಪಿಸುತ್ತದೆ.

5. 31 ಮಾರ್ಚ್ 2010ಕ್ಕೆ ಕೊನೆಗೊಂಡ ವರ್ಷದ ರಾಜ್ಯ ಹಣಕಾಸಿನ ವ್ಯವಹಾರಗಳ ವರದಿಗೆ, ಸಾರ್ವಜನಿಕ ಲೆಕ್ಕ ಸಮಿತಿಯ ಶಿಫಾರಸಿನ ಮೇಲೆ (ಹದಿಮೂರನೇ ವರದಿ – ಡಿಸೆಂಬರ್ 2011) ಸರ್ಕಾರವು ತೆಗೆದುಕೊಂಡ ಕ್ರಮದ ವರದಿಯ ಮೇಲಿನ ಸಾರ್ವಜನಿಕ ಲೆಕ್ಕ ಸಮಿತಿಯ ಶಿಫಾರಸುಗಳನ್ನು (ಐದನೇ ವರದಿ – ಜುಲೈ 2015) ಗಣನೆಗೆ ತೆಗೆದುಕೊಂಡು ವರದಿಯನ್ನು ತಯಾರಿಸಲಾಗಿದೆ.

6. ಕಾರ್ಯನಿರ್ವಹಣಾ ಲೆಕ್ಕ ಪರಿಶೋಧನೆಯ ಮತ್ತು ವಿವಿಧ ಇಲಾಖೆಗಳ ವಹಿವಾಟುಗಳ ಲೆಕ್ಕಪರಿಶೋಧನಾ ಫಲಿತಾಂಶಗಳ, ಸರ್ಕಾರದ ಕಂಪನಿಗಳ, ಶಾಸನಬದ್ಧ ನಿಗಮಗಳ, ಮಂಡಳಿಗಳ ಮತ್ತು ಪಂಚಾಯತ್ ರಾಜ್ ಸಂಸ್ಥೆಗಳ ಲೆಕ್ಕ ಪರಿಶೋಧನೆಯಲ್ಲಿ ಕಂಡು ಬಂದ ಅಭಿಪ್ರಾಯಗಳು ಮತ್ತು ರಾಜಸ್ವ ಸ್ವೀಕೃತಿಗಳ ಲೆಕ್ಕ ಪರಿಶೋಧನೆಯಲ್ಲಿ ಕಂಡು ಬಂದ ಅಂಶಗಳನ್ನು ಒಳಗೊಂಡ ವರದಿಗಳನ್ನು ಪ್ರತ್ಯೇಕವಾಗಿ ಮಂಡಿಸಲಾಗಿದೆ.

7. ಈ ಭಾಷಾಂತರಿಸಿದ ಆವೃತ್ತಿಯಲ್ಲಿನ ಯಾವುದೇ ಸಂದೇಹಗಳಿಗೆ, ಆಂಗ್ಲ ಭಾಷಾ ಆವೃತ್ತಿಯೇ ಅಧಿಕೃತವೆಂದು ಪರಿಗಣಿಸಬೇಕು.